ಅನುಬಂಧ-1

ಮುಲ್ಕಿ ಹೋಬಳಿಯ ಸಂಕಲ ಕರಿಯ ಕುಡಿಯುವ ನೀರಿನ ಯೋಜನೆ

200 (60) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) - ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಲ್ಕಿ ಹೋಬಳಿಯ 20 ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆಯ ಸಂಕಲ ಕರಿಯ ನೀರು ಸರಬರಾಜು ಯೋಜನೆ ಕಳೆದ ಸಾಲಿನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಮಂಜೂರಾತಿಯ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ ;

ಆ) ಹಾಗಿದ್ದಲ್ಲಿ, ಚಾಲ್ತಿ ಸಾಲಿನಲ್ಲಿ ಮಂಜೂರಾತಿ ನೀಡಲು ಸರ್ಕಾರ ಯೋಚಿಸಿದೆಯೇ ;

ಇ) ಈ ಅಣೆಕಟ್ಟು ಕಾಮಗಾರಿ ಪೂರ್ಣಗೊಂಡಲ್ಲಿ, ಸುತ್ತಲಿನ ಸುಮಾರು 10 ಹಳ್ಳಿಗಳಿಗೆ ಬೇಸಾಯಕ್ಕೆ ನೀರು ಮಾತ್ರವಲ್ಲದೆ ಸುತ್ತಲೂ ಅಂತರ್ಜಲ ಮಟ್ಟ ಹೆಚ್ಚಿಸಲು ಅನುಕೂಲವಾಗುವುದಿಲ್ಲವೆ ;

ಈ) ಈ ವಿಷಯದಲ್ಲಿ ಸರ್ಕಾರಕ್ಕೆ ನೀಡಿರುವ ಮನವಿ ಯಾವ ಹಂತದಲ್ಲಿದೆ ; (ವಿವರಗಳನ್ನು ನೀಡುವುದು)?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು)

ಅ) ಮಂಗಳೂರು ಜಿಲ್ಲಾಪಂಚಾಯತ್ ಮುಲ್ಕಿ ಹೋಬಳಿಯ 20 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ರೂ. 810.00 ಲಕ್ಷದ ಸಂಕಲ ಕರಿಯ ಯೋಜನೆಯ ರೇಖಾ ಅಂದಾಜನ್ನು ಸಿದ್ದಪಡಿಸಿರುತ್ತದೆ.

ಆ) ಈ ಯೋಜನೆಯ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಾಧುತ್ವವನ್ನು ಪರಿಶೀಲಿಸಲಾಗುತ್ತಿದೆ.

ಇ) ಅನುಕೂಲವಾಗುತ್ತದೆ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಗಳೂರಿನ ಎಂ.ಆರ್.ಪಿ.ಎಲ್. ಬಳಿ ಇರುವ ಮುಲ್ಕಿಲಿಂಗಪ್ಪಯ್ಯ ಕಾಡು ಪ್ರದೇಶವನ್ನು ಕೊಳಚೆ ಪ್ರದೇಶವನ್ನಾಗಿ ಘೋಷಿಸುವ ಬಗ್ಗೆ

201 (88) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) - ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರಿನ M.R.P.L., ಬಳಿ ಇರುವ ಮುಲ್ಕಿ ಲಿಂಗಪ್ಪಯ್ಯ ಕಾಡು ಪ್ರದೇಶವನ್ನು ಸರ್ಕಾರವು ಕೊಳಚೆ ಪ್ರದೇಶ ಎಂಬುದಾಗಿ ಘೋಷಿಸಿರುವುದು ನಿಜವೇ ;

ಆ) ಮುಲ್ಕಿ ಪಟ್ಟಣದ ಜನಸಂಖ್ಯೆ 1 ಲಕ್ಷಕ್ಕಿಂತ ಕಡಿಮೆ ಇರುವುದರಿಂದ ಸದರಿ ಪ್ರದೇಶ ಎಸ್.ಯು.ಡಿ.ಪಿ. ಯೋಜನೆಯಡಿ ಬರುವುದಿಲ್ಲ ಎಂಬುದು ಸರಿಯೇ ; ಈ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಪರಿಗಣಿಸಿ ಅಲ್ಲಿನ ನಾಗರೀಕರಿಗೆ ಆರೋಗ್ಯ ಮತ್ತು ಇನ್ನಿತರೆ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಇ) ಹಿಂದಿನ ಸಾಲಿನಲ್ಲಿ ಲಿಂಗಪ್ಪಯ್ಯ ಕಾಡು ಕೊಳಚೆ ಪ್ರದೇಶಕ್ಕೆ ಸರ್ಕಾರದ ವತಿಯಿಂದ ಕೈಗೊಂಡ ಕಾಮಗಾರಿಗಳು ಯಾವುವು ;

ಈ) ಮೇಲಿನ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕಾಡನ್ನು ಹಿಂದೆ ವಿಶೇಷ ನೆಲೆಯಲ್ಲಿ ಕೊಳಚೆ ಪ್ರದೇಶವೆಂಬುದಾಗಿ ಘೋಷಿಸಿರುವಂತೆ ಸದರಿ ಪ್ರದೇಶಕ್ಕೆ ಎಸ್‌ಯುಡಿಪಿ ಯೋಜನೆಯಲ್ಲಿ ಸೇರ್ಪಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಉ) ಘೋಷಿತ ಕಾಲನಿಗೆ ತಾಗಿ ಇರುವ ಇನ್ನೊಂದು ಕೊಳಚೆ ಪ್ರದೇಶ ಪ್ರಸ್ತುತ ನಿರ್ಮಾಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಈ ಪ್ರದೇಶ ಕೊಳಚೆ ಪ್ರದೇಶ ಎಂಬುದಾಗಿ ಘೋಷಿಸುವಂತೆ ನೀಡಿರುವ ಮನವಿ ಪ್ರಸ್ತುತ ಯಾವ ಯಾವ ಹಂತದಲ್ಲಿದೆ ;

ಋ) ಕೊಳಚೆ ಪ್ರದೇಶವನ್ನು ಕೊಳಚೆ ಪ್ರದೇಶವೆಂಬುದಾಗಿ ಘೋಷಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣವೇನು ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ) ಮಂಗಳೂರಿನ MRPL ಬಳಿ ಇರುವ ಮುಲ್ಕಿ ಲಿಂಗಪಯ್ಯ ಕಾಡು (ಬಿಜಾಪುರ ಕಾರ್ನಾಡು) ಕೊಳಚೆ ಪ್ರದೇಶವನ್ನು ಜಿಲ್ಲಾಧಿಕಾರಿಗಳ ಅಧಿಸೂಚನೆ ಸಂಖ್ಯೆ ಎಂಯುಎನ್/5/ಸಿಆರ್/45/ 97-98 ರ ಪ್ರಕಾರ ಕೊಳಚೆ ಪ್ರದೇಶವೆಂದು ಘೋಷಿಸಲಾಗಿದೆ.

ಆ) ನಿರ್ಮಲ ಜ್ಯೋತಿ ಯೋಜನೆಯ ನಿಬಂಧನೆಯನುಸಾರ 1.00 ಲಕ್ಷಕ್ಕಿಂತ ಹೆಚ್ಚಿರುವ ಜನ ಸಂಖ್ಯೆಯುಳ್ಳ ನಗರಗಳನ್ನು ಮಾತ್ರ ಈ ಯೋಜನೆಯಡಿ ಸೇರಿಸಲು ಅವಕಾಶವಿದ್ದು, ಅದರನ್ವಯ ರಾಜ್ಯದ 21 ಮೊದಲನೆ ದರ್ಜೆಯ ನಗರ ಪ್ರದೇಶಗಳನ್ನು ಮಾತ್ರ ಈ ಯೋಜನೆಯಲ್ಲಿ ಆಯ್ಕೆ ಮಾಡಲಾಗಿದೆ. ಈ ಕಾರಣದಿಂದಾಗಿ ಈ ಪ್ರದೇಶವನ್ನು ನಿರ್ಮಲಜ್ಯೋತಿ ಯೋಜನೆಯಡಿ ಸೇರಿಸಲಾಗಿರುವುದಿಲ್ಲ.

ಇ) 2001-02ನೇ ಸಾಲಿನಲ್ಲಿ ಈ ಪ್ರದೇಶಕ್ಕೆ ಕಾಂಕ್ರಿಟ್ ಪೇವಿಂಗ್ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಈ) ಎಸ್.ಯು.ಡಿ.ಪಿ ಯೋಜನೆಯಡಿ 1.00 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ 21 ನಗರಗಳನ್ನು ಮಾತ್ರ ಆಯ್ಕೆ ಮಾಡಲಾಗಿದ್ದು, ಅವುಗಳಲ್ಲಿನ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಆದ ಕಾರಣ ಈ ಪ್ರದೇಶವನ್ನು ಎಸ್ ಯು ಡಿ ಪಿಗೆ ಸೇರಿಸಲಾಗಿರುವುದಿಲ್ಲ.

ಉ) ಘೋಷಿತ ಕಾಲೋನಿಗೆ ತಾಗಿ ಇರುವ ಸದಾಶಿವ ರಾವ್ ಕೊಳಚೆ ಪ್ರದೇಶವನ್ನು ಘೋಷಿಸಲು ಮಂಡಳಿಯವತಿಯಿಂದ ಕ್ರಮಕೈಗೊಳ್ಳಲಾಗುತ್ತಿದ್ದು, ಘೋಷಣೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ನೀಡಲು ಮುಲ್ಕಿ ಪುರಸಭೆಯ ಮುಖ್ಯಾಧಿಕಾರಿಯವರನ್ನು ಕೋರಲಾಗಿದೆ.

ಊ) ಘೋಷಣೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಒದಗಿಸಲು ಮುಖ್ಯಾಧಿಕಾರಿಯವರು ಮುಲ್ಕಿ ಪುರಸಭೆಯವರಿಗೆ 18-10-2002 ರಲ್ಲಿ ಕೋರಲಾಗಿದೆ. ಸದರಿಯವರಿಂದ ದಾಖಲೆಗಳನ್ನು ಪಡೆದ ತಕ್ಷಣವೇ ಮಂಡಳಿ ಸಭೆಯ ಅನುಮೋದನೆ ಸಹಿತ ಘೋಷಣೆ ಹೊರಡಿಸಲು ಕೋರಿ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

ಋ) ಪುರಸಭೆಯಿಂದ ದಾಖಲಾತಿಗಳನ್ನು ಒದಗಿಸುವಲ್ಲಿ ವಿಳಂಬ ಉಂಟಾಗಿರುತ್ತದೆ.